accountable and in order to see that the community should not suffer, they should step down.

SRI QAMRUAL ISLAM:- You correct this answer. This answer permits them. I don't want permission should be given to them till the matter of Shariyat is clarified. I request you to please withheld this answer till the matter is clarified.

SRI S.M. YAHYA:- I have already said that absolutely I do not want to interfere in the matters of Shariyat. We could talk about this outside the House also. Let us not discuss about Shariyat here.

ಬೆಳಗಾವಿ ಜಿಲ್ಲೆಯಲ್ಲಿ ದೇವದಾಸಿಯರಿಗೆ ಪುನರ್ ವಸತಿ ಕಲ್ಪಿಸಿಕೊಡುವ ಬಗ್ಗೆ.

1277 ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ):- ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ದೇವದಾಸಿಯರ ಪುನರ್ ವಸತಿಗೆ ಸರ್ಕಾರವು ಹೊಸ ಯೋಜನೆಗಳನ್ನು ರೂಪಿಸಿದೆಯೇ;

ಆ) ಹಾಗಿದ್ದಲ್ಲಿ ರೂಪಿಸಲಾಗುವ ಯೋಜನೆಗಳು ಯಾವುವು;

ಇ) ಯೋಜನೆಗಳಿಗೆ ಮಂಜೂರಾದ ಹಣವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ) ದೇವಾದಾಸಿಯರ ಪುನರ್ ವಸತಿಗಾಗಿ ಹೊಸ ಯೋಜನೆಗಳನ್ನು ರೂಪಿಸಲು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಜೊತೆ ವ್ಯವಹರಿಸಲಾಗುತ್ತಿದೆ.

ಆ) ಇನ್ನೂ ಯೋಜನೆಗಳನ್ನು ರೂಪಿಸಲಾಗುತ್ತದೆ.

ಇ) ಸರ್ಕಾರವು 1989-90ನೇ ಸಾಲಿನಲ್ಲಿ ದೇವಾದಾಸಿಯರ ಪುನರ್ ವಸತಿಗಾಗಿ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ರೂ 15.00 ಲಕ್ಷ ಹಣವನ್ನು ಮಂಜೂರು ಮಾಡಿದೆ.

SRI SUBHASH JOSHI (Nippani) :- Sir, the Government have replied to my question (b), 'The formulation of Scheme is under process'. I would like to know, when this process would be completed. Secondly Sir, I would like to know, whether there are any preventive schemes for non-dedication of Devadasis. The dedications are going on. Therefore, some preventive schemes are required to be taken up and the preventive schemes should be such that there will be total stoppage of dedication. Sir, this is a very sensitive issue and I do not want a reply from the Government that they would examine this. I want concrete steps to be taken up by the Government for rehabilitation of Devadasis. Thirdly Sir, on 2nd August 1990, the Hon.Minister for Social Welfare, Maharashtra State is coming to Karnataka to meet his counterpart here. Whether you are going to have a joint venture on this?

SRI B. SHIVANNA:- Sir, the Government is seriously thinking of Devadasis rehabilitation programme. We have taken lot of steps. We have taken preventive measures. There is no dispute that it is a serious issue. I think, it is a very difficult problem to solve. The concerned people have netiher cared nor taken any interest so far. The Government is implementing the Rehabilitation Programme for Devadasis since 5-6 years. We have rehabilitated 233 cased since 1983. Their marriages are being conducted as a part of the rehabilitation programme. Unfortunately, it is being given a religious colour. The dedication of female child in the name of Yellamma is prevelent in North Karnataka, areas like Dharwad, Belgaum, Raichur and in some parts of Gulbarga. Sir, this has been in practice for so many years. The dedication of devadasis must go and it is the view of the Government and I suppose, it is the opion of most of the legislators also. We have taken up scheme for rehabilitation of devadasis. However, it is such a problem that in the name of God, people are exploiting those dedicated female children, specially called, Devadasis. We have already spent Rs.15 lakhs through the SC/ST Development Corporation for their rehabilitation out of Rs.60 lakhs. We have taken certain measures under the rehabilitation programme. We are giving them training in tailoring and other small crafts. The Hon.Minister for Finance is also kind enough to extend financial help to the various programmes of Social Welfare Department. My counterpart from Maharashtra is coming here and we will discuss about this. If there are any suggestions from the Hon.Members, I request them to please forward them to me and I welcome their suggestions.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಶಿವಣ್ಣನವರಿಗೂ, ದೇವದಾಸಿಯರಿಗೂ ಸಂಬಂಧ ಏನು? ಶಿವಣ್ಣನವರಿಗೂ ಮಕ್ಕಳಿಗೂ ಸಂಬಂಧ ಏನು? You are a bachelor.

ಶ್ರೀ ಬಿ. ಶಿವಣ್ಣ:– ತಮಗೆ ಒಂದೇ ಅಂಶ ಹೇಳುತ್ತೇನೆ. ಬಹಳ ಜನ ಮಕ್ಕಳು ಮತ್ತು ಹೆಂಡತಿ ಇರುವವರು ಮನೆ ಬಿಟ್ಟು ಹೊರಗೆ ಹೋಗುವಹಾಗಿಲ್ಲ. ಆದರೆ ನಾನು ಬ್ರಹ್ಮಚಾರಿಯಾದ ಕಾರಣ....

(ಗೊಂದಲ)

SRI SUBHASH JOSHI:- Sir, my concern is that dedication is still going on and especially, dalit women are being dedicated. This year is the Birth Anniversary of Dr.B.r. Ambedkar. Whether the Government would take special care for non-dedication, especially, in respect of dalit women? Secondly, you did not answer to my question that your counterpart in Maharashtra is coming here on 2nd August to discuss about this. They have submitted a report. Whether the Government of Karnataka is also going to constitute an Inquiry Commission for non-dedication of devadasis?

ಶ್ರೀ ಬಿ. ಶಿವಣ್ಣ:- ಮಹಾರಾಷ್ಟ್ರದ ಸಮಾಜ ಕಲ್ಯಾಣ ಮಿನಿಸ್ಟರು ಬರುತ್ತಿದ್ದಾರೆ, ಅವರೂ ನಾವೂ ಕೂಡಿ, ಮಾತನಾಡಿ ವಿಚಾರ ಮಾಡುತ್ತೇವೆ. ಇದು ಅಷ್ಟು ಸುಲಭದ ಕೆಲಸವಲ್ಲ. We have taken preventive measures. We have directed the SP and DC of these concerned districts not to allow such people. We are also making a survey. ಟಿಂಪಲ್‌ನಲ್ಲಿ ಮೊದಲು ಆಗುತ್ತಿತ್ತು. ವಿಲೇಜ್‌ನಲ್ಲಿ ಅಲ್ಲಲ್ಲಿ ಜನರು ಯಾವಾಗ ಬಂಮಹೋಗುತ್ತಾರೋ ಗೊತ್ತಾಗುವುದಿಲ್ಲ. ಆದರೆ ಬಹಳಮಟ್ಟಿಗೆ ಕಡಿಮೆಯಾಗುತ್ತಾ ಬಂದಿದೆ, ಕಡಿಮೆಯಾಗಿದೆ. ಇದು ಸ್ವಲ್ಪ ಕಷ್ಟವೂ ಇದೆ, ತಾವೂ ಕೂಡ ಸ್ವಲ್ಪ ಇದರ ಬಗ್ಗೆ ಸಹಾಯ ಮಾಡಬೇಕಾಗುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:- ಈ ಪದ್ಧತಿಗೆ ಬಿಡುವ ಮಕ್ಕಳ ತಂದೆತಾಯಿಗಳ ಮೇಲೆ ಎಷ್ಟು ಕೇಸುಗಳನ್ನು ದಾಖಲೆ ಮಾಡಿದ್ದೀರಿ?

ಶ್ರೀ ಬಿ. ಶಿವಣ್ಣ:- ಅದಕ್ಕೆ ಪ್ರಾವಿಷನ್ ಇಲ್ಲ. ಪ್ರಾವಿಷನ್ ಮಾಡುತ್ತೇವೆ.

SRI SUBHASH JOSHI:- Sir, not a single case has been registered uptill now though there are number of cases which came to light.

MR. SPEAKER:- Hon.Minister says that there is no provision.

SRI SUBHASH JOSHI:- Sir, there is a provision. There is a Special Act i.e., Prevention of Dedication of Devadasis Act, 1983.

ಅಧ್ಯಕ್ಷರು:- ಶ್ರೀಮತಿ ದಮಯಂತಿ ಬೋರೇಗೌಡ ಅವರು ಈ ಪದ್ಧತಿಗೆ ಬಿಡುವ ಮಕ್ಕಳ ತಂದೆತಾಯಿಗಳ ಮೇಲೆ ಎಷ್ಟು ಕೇಸ್ ದಾಖಲೆ ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯಮಂತ್ರಿಗಳು ಪ್ರಾವಿಷನ್ ಇಲ್ಲ ಎಂದು ಹೇಳಿದ್ದಾರೆ. ಆದರೆ ಅವರು ಪ್ರಾವಿಜನ್ ಇದೆ ಎಂದು ಹೇಳುತ್ತಾರೆ. ನೀವು ಮುಂದಿನ ಸಾರಿ ಬಂದಾಗ, 1983 ಆಕ್ಟ್ ಓದಿಕೊಂಡು ಬನ್ನಿ.

ಪ್ರೊ।। ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಸಭಾಧ್ಯಕ್ಷರೇ, ಸ್ವಾತಂತ್ರ್ಯ ನಮಗೆ ಬಂದು 43 ವರ್ಷಗಳಾದರೂ ಇನ್ನೂ ಕರ್ನಾಟಕದಲ್ಲಿ ಬೆತ್ತಲೆ ಪೂಜೆ, ದೇವದಾಸಿ ಪದ್ಧತಿ, ಮುಂದುವರಿಯುತ್ತಿದೆ. ನಿಮ್ಮ ಕಾನೂನು ಮೂಲಕ ಇದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಸಂವಿಧಾನದ ಒಂದು ಧಾರ್ಮಿಕ ಹಕ್ಕು, ಇದರೊಳಗೆ ಬರತಕ್ಕ ವಿಶ್ಲೇಷಣೆಯನ್ನು ಶ್ರೇಷ್ಠ ನ್ಯಾಯಲಯ ಈಗಾಗಲೇ ಕೊಟ್ಟುಬಿಟ್ಟಿದೆ. ಆದಕಾರಣ ಇದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ನೀವು ಹೇಳಿದ್ದೀರಿ, ಅಂತರ್ ಜಾತೀಯ ವಿವಾಹ ಆಥವಾ ಆ ಜಾತಿಯಲ್ಲೇ ವಿವಾಹ ಆಗಿ ಪುನರ್‌ವಸತಿಯಾಗುತ್ತಿದೆ ಎಂದು ಹೇಳಿದರೂ ಸಹ ಈ ಪ್ರಯತ್ನಗಳು ಏನೇನೂ ಸಾಲದು. ನೀವು ಮಾಡಬೇಕಾಗಿರುವುದು ಮೂಲತಃ ಯಾರು, ಧರ್ಮದ ಹೆಸರಿನಲ್ಲಿ ಬಳಕೆ ಮಾಡುವುದಕ್ಕೆ ಈ ಒಂದು ಪದ್ಧತಿ ಆ ಕಾಲದಿಂದ ಬಂತು, ಈ ಮೂಲಕಾರಣಕ್ಕೆ ಕೊಡಲಿ ಪೆಟ್ಟು ಹಾಕುವ ಒಂದು ಕೆಲಸವನ್ನು ಮಾಡುತ್ತೀರಾ, ಎಂದು ಆಲೋಚನೆ ಮಾಡಿ. ಏಕೆಂದರೆ ಇವೆಲ್ಲಾ ಮೂಢನಂಬಿಕೆಯ ಮೇಲೆ ಬೆಳೆದುಬಂದಿರುವುದು. ವಿಶೇಷವಾಗಿ ಈ ಒಂದು ಸಂಪ್ರದಾಯ ಆಚರಣೆ ಮಾಡಿಕೊಂಡು ಬರುತ್ತಿರುವ ಬೆತ್ತಲೆ ಪೂಜೆ ಮಾಡುವ ಜನ ಆಥವಾ ಮಕ್ಕಳನ್ನು ದೇವದಾಸಿ ಪದ್ಧತಿಗೆ ಒಳಪಡಿಸತಕ್ಕ ಜನರಿಗೆ ವಿಶೇಷ ಕಾರ್ಯಕ್ರಮ ಹಾಕಿ, ಮುಢ ನಂಬಿಕೆಗಳನ್ನು ತೆಗೆಯದ ಹೊರತು, ತಮ್ಮ ಈ ಪ್ರಿವೆನ್‌ಷನ್ ಕಾನೂನು ಮಾಡಿದರೆ, ಸುಪ್ರೀಂಕೋರ್ಟ್ ಹೊಡೆದುಹಾಕುತ್ತದೆ. ಇದು ಮಾನ್ಯ ಸಭಾಧ್ಯಕ್ಷರಿಗೂ ಗೊತ್ತಿದೆ. It becomes a part of the religious ritual which is a fundamental right ಈ ರೀತಿ ಕಾನೂನಿಂದ ಇದನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಆವರಿಗೆ ವೈಜ್ಞಾನಿಕ ಶಿಕ್ಷಣ ಕೊಡುವುದರ ಮೂಲಕ, ಅವರ ತಲೆಯಲ್ಲಿರತಕ್ಕ ಮೂಢ ನಂಬಿಕೆಗಳನ್ನು ತೆಗೆಯತಕ್ಕ ಪ್ರಯತ್ನವನ್ನು ತಾವು ಮಾಡಿದರೆ, ಕರ್ನಾಟಕದಲ್ಲಿ ನಾವು ಬೆತ್ತಲೆ ಪೂಜೆ ರದ್ದುಮಾಡಬಹುದು ಮತ್ತೆ ದೇವದಾಸಿ ಪದ್ಧತಿ ಇಲ್ಲದರೀತಿ ಮಾಡಬಹುದು.

ಶ್ರೀ ಬಿ. ಶಿವಣ್ಣ:– ಆವರು ಹೇಳಿದ್ದು ಒಳ್ಳೆಯ ಸಲಹೆಗಳಾಗಿವೆ. ನಾವು ಪ್ರಯತ್ನಗಳನ್ನು ಕೂಡಾ ಮಾಡುತ್ತಿದ್ದೇವೆ. ಆ ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಸನ್ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಈ ದೇವದಾಸಿ ಪದ್ಧತಿ ನಮ್ಮ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿದೆ. ಇದಕ್ಕೆ ಕಾರಣ ಎಂದರೆ ಮೊದಲನೆಯದು ಬಡತನ. ಎರಡನೆಯದು ಹರಿಜನ ಗಿರಿಜನರಲ್ಲಿ ಇರತಕ್ಕಂಥ ಮೂಢನಂಬಿಕೆ. ಆವರ ಸಲುವಾಗಿ ಅಲ್ಲಿ ಹೆಚ್ಚಾಗಿ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಮುನವಳ್ಳಿಯಲ್ಲಿ ಆಥಣಿಯಲ್ಲಿ, ಟೈಲರಿಂಗ್ ಕಸೂತಿ ಇಂತಹ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಆದರೆ ಅದು ಸಾಕಾಗುವುದಿಲ್ಲ. ಇನ್ನೂ ಹೆಚ್ಚಾಗಿ ಕಾರ್ಯಕ್ರಮ ಹಾಕಿಕೊಳ್ಳುವ ಸಲುವಾಗಿ ಸರಕಾರ ಯಾವ ಕ್ರಮ ಕೈಗೊಳ್ಳುತ್ತದೆಂದು ನಾನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ: ನಾನು ಮೊದಲೇ ಹೇಳಿದ್ದೇನೆ. ಉಳಿದ ಏನಾದರು ಸಲಹೆಗಳು ಇದ್ದರೆ ಆವರು ಕೊಡಲಿ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೇ, ದೇವದಾಸಿಯರನ್ನು ರಿಹ್ಯಾಬಿಲಿಟೇಟ್ ಮಾಡುವ ಪ್ರೋಗ್ರಾಂನಲ್ಲಿ ಆವರನ್ನು ಮದುವೆಯಾಗಬಹುದು ಎಂದು ಇದೆ. ಮಾನ್ಯ ಸಚಿವರು ಅಂತಹವರನ್ನು ಎಷ್ಟು ಜನರನ್ನು ಹುಡುಕಿ ಮದುವೆ ಮಾಡಿಸಿದ್ದಾರೆ ಎಂದು ಕೇಳಬೇಕಾಗುತ್ತದೆ.

ಶ್ರೀ ಬಿ. ಶಿವಣ್ಣ:– ಇದು ಬಹಳ ಕಷ್ಟದ ಕೆಲಸ ಇದೆ. ಅಷ್ಟು ಈಸಿ ಅಲ್ಲ.

ಅಧ್ಯಕ್ಷರು:– ಒಂದು ಕೆಲಸ ಮಾಡಿ. Why don't you appoint a one man Commission under Mr. Shivamurthy?

ಶ್ರೀ ಕೆ. ಶಿವಮೂರ್ತಿ:– ದೇವದಾಸಿಯರನ್ನು ಐಡೆಂಟಿಫೈ ಮಾಡಿ ಆವರಿಗೆ ರಿಹ್ಯಬಿಲಿಟೇಟ್ ಮಾಡಬೇಕಾದರೆ, ಆವರಿಗೆ ಮದುವೆ ಮಾಡಿಸಿಬಿಟ್ಟು ಚೇಷನ ಕೊಡಬಹುದು ಎಂದು ಇದೆ. ಅದನ್ನು ಯಾವ ಕಾರ್ಯಕ್ರಮದಲ್ಲಿ ಎಷ್ಟು ಜನಕ್ಕೆ ಮದುವೆ ಮಾಡಿಸಿದ್ದರೆ ಎಂದು ಸಚಿವರನ್ನು ಕೇಳುತ್ತಿದ್ದೇನೆ. ಒನ್ ಮ್ಯಾನ್ ಕಮಿಷನ್ ಆಪಾಯಿಂಟ್ ಮಾಡುವುದಲ್ಲ, ಇದು ಬಹಳ ದೂರಕ್ಕೆ ಹೋಗಿದೆ.

SRI SUBHASH JOSHI:- I give a suggestion that..

MR. SPEAKER:- Mr. Joshi, whatever suggestions you have, you may just pass them on to the Minister. He has said that he has allocated Rs.60 lakhs.

ಶ್ರೀ ಬಿ. ಶಿವಣ್ಣ:– 15 ಲಕ್ಷ ಮಾತ್ರ. 60 ಲಕ್ಷ ಅಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ರಿಹ್ಯಾಬಿಲಿಟೇಷನ್ ಮಾಡಬೇಕಾದರೆ ಯಾರಿಗೆ ಮದುವೆ ಮಾಡಿಸದೇ ಇದ್ದರೂ ಮಂತ್ರಿಗಳಿಂದ ಈ ಕೆಲಸ ಪ್ರಾರಂಭ ಮಾಡಬಹುದು.

ಶ್ರೀ ಬಿ. ಶಿವಣ್ಣ:– ಇದು ಪರ್ಸನಲ್. ದಯವಿಟ್ಟು ಆವರು ಇದನ್ನು ಯೂಸ್ ಮಾಡಬಾರದು. I am very sentimental in this respect. ನಾನು ಏತಕ್ಕೆ ಮದುವೆ ಮಾಡಿಕೊಳ್ಳಲಿಲ್ಲ ಎಂದು ಬೇಕಾದರೆ ಚರ್ಚೆ ಮಾಡಲಿ. ಆಗ ಮದುವೆ ಅಂದರೆ ಏನು ಎಂದು ನಾನು ಹೇಳುತ್ತೇನೆ.

SRI SUBHASH JOSHI: Only marriages with Devadasis will not solve the problem. For the rehabilitation, please take into confidence the voluntary agencies also and an Enquiry Commission should be constituted consisting of social workers and social welfare officers so that we can sort out their problems.

MR. SPEAKER: It is more a social malaiso. Social efforts are also required. Governmental efforts will not make any dent on it. I think you should enlist the support of the voluntary organisations.

Sri Fullinfaw, for your question (No.975) they need some time because they have to collect the statistics from various Districts.

SRI DERRICL M.B. FULLINFAW: Can I make a suggestion to the Hon.Minister? As a representative of the Anglo Indian Community, I request the Hon'ble Government to conduct a proper census of the Anglo Indian Community and also in enquiry into the living conditions of the Anglo-Indian Community. I am prepared to offer assistance from my side. Will the Government consider my proposal?

MR. SPEAKER:- You enlist his assistance and prepare the answer.

SRI B. SHIVANNA:- Yes, Sir.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :- ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಏನು ಹೇಳುತ್ತಿದ್ದೇನೆ ಎಂದರೆ ನಾವು ಸಂವಿಧಾನವನ್ನು ರಚನೆ ಮಾಡುವಾಗ ಆಂಗ್ಲೋ ಇಂಡಿಯನ್ಸ್‌ಗೆ ಆಪ್ರಜ್ಞಾಪೂರ್ವಕವಾಗಿ ಮೀಸ ಮಾಡಿದ್ದೇವೆ ಎಂದು ನನಗನ್ನಿಸುತ್ತದೆ. ತಾವು ಸಂವಿಧಾನದ 16ನೇ ಪರಿಚ್ಛೇದ ನೋಡಿದರೆ ಗೊತ್ತಾಗುತ್ತದೆ. particularly Article 336, the part relates to special provisions relating to certain classess which includes Anglo-Indias, Scheduled Castes, Scheduled Tribes, I read this provision of Article 336(1), 336 second paragraph and the proviso. Article 336 Paragraph 1 :

> "During the first two years after the commencement of this Constitution, appointments of members of the Anglo-Indian community to posts in the railway, customs, postal and telegraph services of the Union shall be made on the same basis as immediately before the fifteenth day of August, 1947".

Second Paragraph :

> "During every succeeding period of two years, the number of posts reserved for the members of the said community in the said services shall, as nearly as possible, be less by ten percent than the numbers so reserved during the immediately preceding period of two years:"

The proviso is a very peculiar proviso which we have stuck to very meticulously soon after the expiry of 10 years of the constitution:

> "Provided that at the end of ten years from the commencement of this Constitution all such reservations shall cease."

ಇದನ್ನು ನಾವು ಮರ್ಸಿಲೆಸ್ ಆಗಿ being a majority we have stuch to this 10 years period mercilessly. ಆಮೇಲೆ ಅವರ ಸ್ಥಿತಿಗತಿ ಏನಾಯಿತೆಂಬ ಬಗ್ಗೆ ನಾವು ಯಾರೂ ಸಹ ಆಲೋಚನೆ ಮಾಡಲಿಲ್ಲ. ಯಾವುದೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಚನೆ ಮಾಡಿದರೂ ಕೂಡ....

ಅಧ್ಯಕ್ಷರು:- ಈ ಪ್ರಶ್ನೆಗೆ ಇನ್ನೂ ಉತ್ತರ ಬಂದಿಲ್ಲ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ:- ಅವರು ಏನೋ ಕಾಲಾವಕಾಶ ಕೇಳಿದ್ದಾರೆ. Meanwhile I request the Minister to conduct a socio-economic survery immediately. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಜನಾಂಗದವರು 10 ಸಾವಿರದಷ್ಟು ಇದ್ದಾರೆ. that too

most of them are in Bangalore City. You conduct a socio-economic suvrey and try to include them in the backward classes.

SRI B. SHIVANNA:- For these reasons also I want time.

ರೇಷ್ಮೆ ಗೂಡುಗಳ ಬಗ್ಗೆ.

1695 ಶ್ರೀ. ಜಿ. ರಾಜುಗೌಡ (ಹನೂರು):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1989-90 ರಲ್ಲಿ ಎಷ್ಟು ರೇಷ್ಮೆ ಗೂಡು ಮಾರುಕಟ್ಟೆಗಳಿಗೆ ಬಂದಿದೆ;

ಆ) ಇದರಲ್ಲಿ ಸರ್ಕಾರಿ ಫಿಲೇಚರುಗಳಿಗೆ ಕೊಂಡುಕೊಂಡ ಪ್ರಮಾಣವೆಷ್ಟು;

ಇ) ಉತ್ಪಾದನೆ ಆಗಿರುವ ರೇಷ್ಮೆ ನಟ್ಟಿ ಜೆಲ್ಲಿ ರೇಷ್ಮೆ ಎಷ್ಟು;

ಈ) ಮೇಲ್ಕಂಡ ವರ್ಷದಲ್ಲಿ ಎಲ್ಲಾ ಸರ್ಕಾರಿ ಫಿಲೇಚರುಗಳ ಲಾಭ, ನಷ್ಟ ಎಷ್ಟೆಷ್ಟು? (ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು):-

ಅ) 48,978 ಮೆಟ್ರಿಕ್ ಟನ್ನುಗಳು.

ಆ) 560 ಮೆಟ್ರಿಕ್ ಟನ್ನುಗಳು.

ಇ) ರೇಷ್ಮೆ ನಟ್ಟಿ 13817 ಕೆ.ಜಿ
ಜೆಲ್ಲಿ ರೇಷ್ಮೆ 211 ಕೆ.ಜಿ.

ಈ) ಎಲ್ಲಾ ರೇಷ್ಮೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿವೆ.

1989-90ನೇ ಸಾಲಿನ ನಷ್ಟದ ವಿವರಗಳು ಈ ರೀತಿ ಇದೆ.

ಫಿಲೇಚರು	ನಷ್ಟ (ಲಕ್ಷ ರೂ.ಗಳಲ್ಲಿ)
1. ಕೊಳ್ಳೇಗಾಲ	66.54
2. ಸಂತೇಮರಹಳ್ಳಿ	34.84
3. ಚಾಮರಾಜನಗರ	33.75
4. ಮಾಂಬಳ್ಳಿ	23.07
ಒಟ್ಟು	158.20

ಶ್ರೀ ಜಿ. ರಾಜುಗೌಡ:- ಸ್ವಾಮಿ ನಾನು ಸರ್ಕಾರಿ ಫಿಲೇಚರ್ಸ್ ಎಷ್ಟು ಎಂದು ಕೇಳಿದ್ದೆ. ಅವರು 4 ಎಂದು ಉತ್ತರ ಕೊಟ್ಟಿದ್ದಾರೆ. ಬಹುಶಃ ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಟಿ. ನರಸೀಪುರ ಮತ್ತು ಕನಕಪುರದಲ್ಲಿರುವುದನ್ನು ಬಿಟ್ಟುಬಿಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ 4 ಸರ್ಕಾರಿ ರೇಷ್ಮೆ ಕಾರ್ಖಾನೆಗಳಿಂದ ಸುಮಾರು 1 ಕೋಟಿ 58 ಲಕ್ಷ 20 ಸಾವಿರ ರೂಪಾಯಿಗಳ ನಷ್ಟ 1989ರಲ್ಲಿ ಆಗಿದೆ ಎಂದು ಹೇಳಿದ್ದಾರೆ. ಸ್ವಾಮಿ ಈಗ ಇರತಕ್ಕಂಥ ಕಾರ್ಖಾನೆಗಳನ್ನು ಮುಚ್ಚಿ ಆಲ್ಲಿ ಇರತಕ್ಕಂಥ ಎಲ್ಲಾ ವರ್ಕರ್ಸ್‌ಗೆ ವರ್ಷವಿಡೀ ಸಂಬಳ ಕೊಟ್ಟರೂ ಇದಕ್ಕಿಂತ ಕಡಿಮೆ ನಷ್ಟವಾಗುತ್ತದೆ. ಈ ನಷ್ಟವನ್ನು ತಗ್ಗಿಸಲು ತಾವು ಏನು ಮಾಡಿತ್ತೀರಿ? ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಇಲ್ಲಿ ಸರಿಯಾದ ಉತ್ತರ ನನಗೆ ಸಿಕ್ಕಿಲ್ಲ. ಏಕೆಂದರೆ 560 ಮೆಟ್ರಿಕ್ ಟನ್ ಗೂಡನ್ನು ಕರಗಿಸಿದಾಗ ರೇಷ್ಮೆ ನಟ್ಟಿ, ರೇಷ್ಮೆ ಜೆಲ್ಲಿ ಎಷ್ಟಾಗುತ್ತದೆಂದು ಕೇಳಿದ್ದೇನೆ. ಅದಕ್ಕೆ ಬಹುಶಃ ಸರಿಯಾದ ಉತ್ತರ ಬಂದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಾವು ದಯಮಾಡಿ ತಡೆಹಿಡಿದು ಸರಿಯಾದ ಉತ್ತರ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.